ಆ) ಕುಣಿಗಲ್ ತಾಲ್ಲೂಕಿನ ಚೌಡನಕುಪ್ಪೆ ಮತ್ತು ಭಕ್ತರಹಳ್ಳಿ ಗ್ರಾಮಗಳಲ್ಲಿ ಪಶುಚಿಕಿತ್ಸಾಲಯ ಕಟ್ಟಡಗಳ ನಿರ್ಮಾಣಕ್ಕೆ ಅನುದಾನಗಳ ಬೇಡಿಕೆ ಬಾಕಿ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಬಂದಿದ್ದಲ್ಲಿ, ಜರೂರಾಗಿ ಅನುದಾನಗಳನ್ನು ಸರ್ಕಾರ ಒದಗಿಸುವುದೇ?

ಶ್ರೀ ರೇವೂ ನಾಯಕ್ ಬೆಳಮಗಿ (ಪಶುಸಂಗೋಪನಾ ಸಚಿವರು) :

ಅ) ಕುಣಿಗಲ್ ತಾಲ್ಲೂಕಿನಲ್ಲಿ ಕೆಳಕಂಡ ಪಶುವೈದ್ಯ ಸಂಸ್ಥೆಗಳಿಗೆ ಕಟ್ಟಡಗಳ ಅವಶ್ಯಕತೆ ಇದೆ.

1) ಪ್ರಾಥಮಿಕ ಪಶುಚಿಕಿತ್ಸಾ ಕೇಂದ್ರ, ನಾಗಸಂದ್ರ
2) ಪ್ರಾಥಮಿಕ ಪಶುಚಿಕಿತ್ಸಾಕೇಂದ್ರ ಕೊಡವತ್ತಿ
3) ಪಶುಚಿಕಿತ್ಸಾಲಯ, ಕೀಲಾರ
4) ಪಶುಚಿಕಿತ್ಸಾಲಯ, ಅಮೃತೂರು
5) ಪಶುಚಿಕಿತ್ಸಾಲಯ, ಉಜ್ಜನಿ
6) ಕೃತಕಗರ್ಭದಾರಣ ಕೇಂದ್ರ, ರಾಜೇಂದ್ರಪುರ
7) ಕೃತಕಗರ್ಭದಾರಣ ಕೇಂದ್ರಸೆಣಬ

ಆ) 2006–07ನೇ ಸಾಲಿನಲ್ಲಿ ಆರ್.ಐ.ಡಿ.ಎಫ್ xi ರಡಿಯಲ್ಲಿ ಚೌಡನಕುಪ್ಪೆ ಪಶುಚಿಕಿತ್ಸಾಲಯದ ಕಟ್ಟಡವನ್ನು ನಿರ್ಮಿಸಲಾಗಿದೆ. ಕೃತಕಗರ್ಭ ದಾರಣ ಕೇಂದ್ರ ಭಕ್ತರಹಳ್ಳಿಯ ಕಟ್ಟಡವು ಶಿಥಿಲಾವಸ್ಥೆಯಲ್ಲಿದ್ದು, ಅದನ್ನು ಕೆಡವಿ ಹೊಸ ಕಟ್ಟಡವನ್ನು ನಿರ್ಮಿಸಬೇಕಾಗಿದೆ.

ಇ) ಪರಿಶೀಲಿಸಿ ಸೂಕ್ತಕ್ರಮ ವಹಿಸಲಾಗುವುದು.

ಬೋಧಕರ ಹುದ್ದೆಗಳ ಭರ್ತಿ ಮಾಡುವುದು

799 (79) ಶ್ರೀ ರಾಮಸ್ವಾಮಿಗೌಡ ಬಿ.ಬಿ. (ಕುಣಿಗಲ್) : ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕುಣಿಗಲ್ ಪಟ್ಟಣದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಬೋಧಕರ ಕೊರತೆಯಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದಲ್ಲಿ, ಕೊರತೆಯಿರುವ ಬೋಧಕರ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮ ಕೈಗೊಳ್ಳುವುದೇ?

ಶ್ರೀ ಅರವಿಂದ ಲಿಂಬಾವಳಿ (ಉನ್ನತ ಶಿಕ್ಷಣ ಸಚಿವರು) :

ಅ) ಕುಣಿಗಲ್ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಒಟ್ಟು 15 ಉಪನ್ಯಾಸಕರ ಹುದ್ದೆಗಳು ಮಂಜೂರಾಗಿದ್ದು, ಎಲ್ಲಾ ಹುದ್ದೆಗಳನ್ನು ತುಂಬಲಾಗಿದೆ. ಆದ್ದರಿಂದ ಸದರಿ ಕಾಲೇಜಿನಲ್ಲಿ ಯಾವುದೇ ಮಂಜೂರಾದ ಖಾಲಿ ಹುದ್ದೆಗಳು ಇರುವುದಿಲ್ಲ.

ಆ) ಉದ್ಭವಿಸುವುದಿಲ್ಲ.

ಕುಣಿಗಲ್ ತಾಲ್ಲೂಕಿನಲ್ಲಿ ಹೆಚ್ಚುವರಿ ಆಯ್ಕೆಯಾದ ಗ್ರಾಮಗಳಿಗೆ ಅನುದಾನ ಬಿಡುಗಡೆ ಬಗ್ಗೆ

800 (80) ಶ್ರೀ ರಾಮಸ್ವಾಮಿಗೌಡ ಬಿ.ಬಿ. (ಕುಣಿಗಲ್) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸುವರ್ಣ ಗ್ರಾಮೋದಯ ಯೋಜನೆಯಡಿ ಕುಣಿಗಲ್ ತಾಲ್ಲೂಕಿನಲ್ಲಿ ಆಯ್ಕೆ ಮಾಡಿರುವ ಗ್ರಾಮಗಳೆಷ್ಟು; ಯೋಜನೆಯಡಿ ಪ್ರತಿ ಗ್ರಾಮಗಳಿಗೆ ನಿಗದಿಪಡಿಸಿದ ಅನುದಾನಗಳೆಷ್ಟು;

ಆ) ಒತ್ತಡ/ಪ್ರಭಾವಗಳ ಆಧಾರದ ಮೇಲೆ ಹೆಚ್ಚುವರಿಯಾಗಿ ಎಷ್ಟು ಗ್ರಾಮಗಳನ್ನು ಆಯ್ಕೆ ಮಾಡಲಾಗಿದೆ;

ಇ) ಹೆಚ್ಚುವರಿ ಆಯ್ಕೆಯಾದ ಗ್ರಾಮಗಳಿಗೆ ಯೋಜನೆಯ ಮಾನದಂಡಗಳಂತೆ ಅನುದಾನಗಳನ್ನು ಒದಗಿಸಲಾಗಿದೆಯೇ ಅಥವಾ ಮೂಲ ಆಯ್ಕೆಯಾದ ಗ್ರಾಮಗಳ ಅನುದಾನಗಳಲ್ಲಿಯೇ ಕಟಾಯಿಸಿ ಒದಗಿಸ ಲಾಗಿದೆಯೇ;

ಈ) ಆಯ್ಕೆ ಮಾಡಿದ ಗ್ರಾಮಗಳಿಗೆ ನಿಗದಿ ಪಡಿಸಿದ ಅನುದಾನ ಗಳನ್ನು ಕಟಾಯಿಸಿ, ಹೆಚ್ಚುವರಿಯಾಗಿ ಆಯ್ಕೆ ಮಾಡಿದ ಗ್ರಾಮಗಳಿಗೆ ಅನುದಾನಗಳನ್ನು ಒದಗಿಸಿರುವುದು ಯೋಜನೆಯ ಮಾನದಂಡಗಳಿಗೆ ಸರಿಯಾದ ಕ್ರಮವೇ;

ಉ) ಮೇಲಿನ ಯೋಜನೆಯಡಿ ಆಯ್ಕೆ ಮಾಡಿರುವ ಯಡಿಯೂರು ಗ್ರಾಮದ ಬದಲಿಗೆ ಬಸವನಮತ್ತಿಕೆರೆ ಗ್ರಾಮವನ್ನು ಆಯ್ಕೆ ಮಾಡಬೇಕೆಂದು ಸರ್ಕಾರಕ್ಕೆ ಸಲ್ಲಿಸಿರುವ ಪ್ರಸ್ತಾವದ ಬಗ್ಗೆ ಕೈಗೊಂಡಿರುವ ಕ್ರಮಗಳೇನು?